**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್.ಸಿ ರವರ ನ್ಯಾಯಾಲಯ, ಮಳವಳ್ಳಿ**

**ಸಿಸಿ ನಂಃ 315/2025**

**ಫಿರ್ಯಾದಿ** ಃ ಕರ್ನಾಟಕ ಸರ್ಕಾರ,
ಹಲಗೂರು ಪೋಲೀಸ್ ಠಾಣೆ ಮುಖೇನ.

- ವಿರುದ್ದ -

**ಆರೋಪಿ 2** ಃ **ಸಂಜಯ್.ಕೆ ಬಿನ್ ಕೆಂಪರಾಜು**
**ವಯಸ್ಸು** ಃ 18 ವರ್ಷ,
**ವಾಸಃ** ವಾರ್ಡ್ ನಂ.17, ಪೇಟೆ ಬೀದಿ,
ಮಳವಳ್ಳಿ ಟೌನ್, ಮಂಡ್ಯ ಜಿಲ್ಲೆ.

## ಆರೋಪಣೆ

ದಿನಾಂಕ **15.06.2025** ರಂದು ಸಂಜೆ **6.15** ಗಂಟೆಯ ಸಮಯದಲ್ಲಿ ಹಲಗೂರು ಪೊಲೀಸ್ ಠಾಣಾ ವ್ಯಾಪ್ತಿಯ ಬಾಣಸಮುದ್ರ ಗ್ರಾಮದ ಗೇಟ್ ಬಳಿ ಹಾದು ಹೋಗಿರುವ ಕನಕಪುರ-ಮಳವಳ್ಳಿ ರಸ್ತೆಯಲ್ಲಿ ಆದ ಅಪಘಾತದ ಸಂದರ್ಭದಲ್ಲಿ, **2** ನೇ ಆರೋಪಿಯಾದ ನೀವು ಮೋಟಾರ್ ಸೈಕಲ್ ಅನ್ನು ಚಾಲನೆ ಮಾಡಲು ಚಾಲನಾ ಪರವಾನಿಗೆ ಇಲ್ಲದೇ ಇದ್ದರೂ ಸಹ ನಿಮ್ಮ ಬಾಬ್ತು ಕೆಎ-**11**-ಇವೈ-**6779** ನಂಬರಿನ ಮೋಟಾರ್ ಸೈಕಲ್ ಅನ್ನು ಚಾಲನೆ ಮಾಡಿದ್ದು, ಆ ಮೂಲಕ ಭಾರತೀಯ ಮೋಟಾರ್ ವಾಹನ ಕಾಯಿದೆ ಕಲಂ **3** ಸಹವಾಚಕ ಕಲಂ **181** ರ ರೀತ್ಯಾ ಈ ನ್ಯಾಯಾಲಯದ ಸಂಜ್ಞಾನದ ವ್ಯಾಪ್ತಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದೀರೆಂದು ನಿಮ್ಮ ವಿರುದ್ದ ಆಪಾದಿಸಿದೆ.

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 2 ನೇ ಆರೋಪಿಯಾದ ನೀವು ನಿಮ್ಮ ಬಾಬ್ತು ಕೆಎ-11-ಇವೈ-6779 ನಂಬರಿನ ಮೋಟಾರ್ ಸೈಕಲ್‌ನಲ್ಲಿ 3 ಜನರು ಪ್ರಯಾಣ ಮಾಡುವುದು ಅಪರಾಧ ಎಂದು ಗೊತ್ತಿದ್ದರೂ ಸಹ ಬೈಕ್‌ನಲ್ಲಿ ಚಾಸಾ3 ಮತ್ತು 4 ರವರನ್ನು ಕೂರಿಸಿಕೊಂಡು ಚಾಲನೆ ಮಾಡಿದ್ದು, ಆ ಮೂಲಕ ಭಾರತೀಯ ಮೋಟಾರ್ ವಾಹನ ಕಾಯಿದೆ ಕಲಂ 177 ರ ರೀತ್ಯಾ ಈ ನ್ಯಾಯಾಲಯದ ಸಂಜ್ಞಾನದ ವ್ಯಾಪ್ತಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದೀರೆಂದು ನಿಮ್ಮ ವಿರುದ್ದ ಆಪಾದಿಸಿದೆ.

ಪ್ರಶ್ನೆಃ 1. ಮೇಲೆ ಓದಿ ಹೇಳಿ ವಿವರಿಸಿದ ಆಪಾದನೆಯು ಅರ್ಥವಾಯಿತೇ ?

**ಉತ್ತರಃ**

ಪ್ರಶ್ನೆ. 2. ಆಪಾದನೆಯನ್ನು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆ
ಬಯಸುತ್ತೀರಾ ?

**ಉತ್ತರಃ**

(ಮೇಲ್ಕಂಡ ಆರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಆರೋಪಿ ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಿ ಸರಿಯಾಗಿರುತ್ತದೆಂದು ಈ ಮೂಲಕ ದೃದೀಕರಿಸುತ್ತೇನೆ.)

ದಿನಾಂಕಃ 21.01.2026

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ, ಮಳವಳ್ಳಿ.**